ಆ) ಕಳೆದ 3 ವರ್ಷಗಳಲ್ಲಿ ಈ ದೇವಾಲಯಕ್ಕೆ ಜೀರ್ಣೋದ್ಧಾರಕ್ಕಾಗಿ ಸರ್ಕಾರದಿಂದ ಅನುದಾನ ನೀಡಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಇಲ್ಲ

ಉ) ಉದ್ಭವಿಸುವುದಿಲ್ಲ.

ರಾಜ್ಯದ ಉಪನೋಂದಣಾಧಿಕಾರಿ ಕಚೇರಿಗಳಲ್ಲಿ ಹೆಚ್ಚು ಲಂಚವಿರುವ ಬಗ್ಗೆ

602 ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಪನೋಂದಣಾಧಿಕಾರಿ ಕಚೇರಿಗಳಲ್ಲಿ ಹೆಚ್ಚು ಲಂಚವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದರೆ, ಅದನ್ನು ನಿರ್ಮೂಲನ ಮಾಡಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು).–

ಅ) ಸರ್ಕಾರದ ಗಮನಕ್ಕೆ ಅಂತಹ ದೂರುಗಳು ಬಂದಿಲ್ಲ.

ಆ) ಬಂದಾಗ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಹರಪನಹಳ್ಳಿ ಪಟ್ಟಣದ ಬೀಡಿ ಕಾರ್ಮಿಕರಿಗೆ ಸಾಲ ಮಂಜೂರು ಮಾಡುವ ಬಗ್ಗೆ

636 ಶ್ರೀ ಬಿ.ಹೆಚ್. ಯಂಕಾನಾಯಕ್ (ಹರಪನಹಳ್ಳಿ) :– ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹರಪನಹಳ್ಳಿ ಪಟ್ಟಣದಲ್ಲಿ ಸುಮಾರು 14 ಸಾವಿರ ಬೀಡಿ ಕಾರ್ಮಿಕರು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಸದರಿ ಬೀಡಿ ಕಾರ್ಮಿಕರಿಗೆ ಸರ್ಕಾರದಿಂದ ಯಾವುದೇ ಸಾಲ ಮಂಜೂರಾಗದಿರುವುದು ನಿಜವಲ್ಲವೇ?

ಇ) ಹಾಗಿದ್ದಲ್ಲಿ, ಹರಪನಹಳ್ಳಿಯ ಬೀಡಿ ಕಾರ್ಮಿಕರಿಗೆ ಸಾಲ ರೂಪದಲ್ಲಿ ಆರ್ಥಿಕ ನೆರವು ಮಾಡುವಲ್ಲಿ ಸರ್ಕಾರವು ಮುಂದೆ ಬರುವುದೆ?

ಶ್ರೀ ಎ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಮಂತ್ರಿಗಳು).–

ಅ) ಹರಪನಹಳ್ಳಿ ಪಟ್ಟಣದಲ್ಲಿ ಸುಮಾರು 5 ಸಾವಿರ ಬೀಡಿ ಕಾರ್ಮಿಕರು ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಕಾರ್ಮಿಕ ಇಲಾಖೆಯ ಮತಿಯಿಂದ ಯಾವುದೇ ರೂಪದ ಸಾಲವನ್ನು ಮಂಜೂರಾತಿ ಮಾಡಿರುವುದಿಲ್ಲ.

ಇ) ಈ ಇಲಾಖೆಯಿಂದ ಬೀಡಿ ಕಾರ್ಮಿಕರಿಗಾಗಿ ಯಾವುದೇ ಸಾಲ ಮಂಜೂರು ಮಾಡುವ ಯೋಜನೆ ಇರುವುದಿಲ್ಲ.